ಸರಿಯಾಗುವುದಿಲ್ಲವೆಂದು ನಾವು ನಿರ್ಧರಿಸಿದ್ದೆವು. ಒಂದು ದೃಷ್ಟಿಯಿಂದ ಮೊನ್ನೆ ಅದು ಒಳ್ಳೆಯ ದಿವಸವಲ್ಲ ಸ್ವಾಮಿ. ನಮ್ಮ ಮುಖ್ಯಮಂತ್ರಿಗಳು ದಿನಾಂಕವನ್ನು ನಿಗಧಿಪಡಿಸುವಾಗ ಹೆಚ್ಚು ಕಡಿಮೆಯಾಗಿಯೋಚನೆ ಮಾಡದೆ ಕರೆದಿದ್ದರಿಂದ ಇದೆಲ್ಲಾ ಪ್ರಾರಂಭವಾಗಿದೆ. ಉಪಾಧ್ಯಕ್ಷರ ಚುನಾವಣೆ ಆದ ಮೇಲಾದರೂ ಬಹುಶಃ ಇವತ್ತು ಮನೆಯಲ್ಲಿ ಎಲ್ಲಾ ಕೇಳಿ ಮಾಡಿ, ಇದು ಆಗಲೇಬೇಕೆಂದು ಹೆಣ್ಣುಮಕ್ಕಳೂ ಸಹ ಎಲ್ಲಾ ಸದಸ್ಯರಿಗೆ ಸಲಹೆಯನ್ನು ಕೊಟ್ಟು ಕಳುಹಿಸಿರಬೇಕು. ವಿದ್ಯುತ್ ದರದ ಏರಿಕೆಯನ್ನು ವಾಪಸ್ ತೆಗೆದುಕೊಳ್ಳದೇ ಹೋದರೆ ನಾವು ಉಳಿಯುವುದಿಲ್ಲ, ನೀವು ಉಳಿಯುವುದಿಲ್ಲ ಎಂದು ಹೇಳಿ ಕಳುಹಿಸಿರುಬಹುದೆಂದು ಕಾಣುತ್ತದೆ. ಬಹುಶಃ ಮುಖ್ಯಮಂತ್ರಿಗಳು ಇವತ್ತು ಸರಿಯಾದ ನಿಲುವನ್ನು ತೆಗೆದುಕೊಳ್ಳುತ್ತಾರೆಂದು ನಾವೆಲ್ಲಾ ಭಾವಿಸಿದ್ದೇವೆ. ಉಪಾಧ್ಯಕ್ಷರ ಚುನಾವಣೆಯಾದ ಮೇಲೆ ತಾವು ನಮ್ಮ ಕಾರ್ಯಕ್ರಮವನ್ನು ನೆಡೆಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ತಾವು ವಿದ್ಯುತ್ ದರ ಏರಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳದೇ ಇದ್ದರೆ, ನಾವು ನಿಮ್ಮ ಮನೆಯವರ ನಾಯಕತ್ವದಲ್ಲಿ ಮೆರವಣಿಗೆ ಮಾಡಿಸಬೇಕಾಗುತ್ತದೆ. ಏಕೆಂದರೆ ಮನೆಯ ಹೆಣ್ಣುಮಕ್ಕಳು ಯಾರೂ ನಿಮ್ಮನ್ನು ಬಿಡುವುದಿಲ್ಲ. . .

ಅಧ್ಯಕ್ಷರು:- ಬಹಳ ಜನ ಬರಬೇಕಾಗುತ್ತದೆ, ತಾವು ಕುಳಿತುಕೊಳ್ಳಿ, ಎಲ್ಲಾ ಗೊತ್ತಿದ್ದು ನೀವು ಹೀಗೆ ಮಾತನಾಡಿದರೆ ಹೇಗೆ ಹೇಳಿ?

ಶ್ರೀ ಕೆ.ಎಸ್.ಈಶ್ವರಪ್ಪ:- ಅಧ್ಯಕ್ಷರೆ, ಬರೀ ಅವರ ಹೆಣ್ಣುಮಕ್ಕಳೇ ಸಾಕು , ಬೇರೆ ಹೊರಗಡೆ ಹೆಣ್ಣುಮಕ್ಕಳು ಬೇಡ.

ಅಧ್ಯಕ್ಷರು:- ಇವರು ಆ ಇಲಾಖೆಯವರೇ ಅಲ್ಲ.

ಶ್ರೀ ವಾಟಾಳ್ ನಾಗರಾಜ್:- ಇಲ್ಲ, ನೀವು ಬಹಳ ಮಾರ್ಮಿಕವಾಗಿ ಹೇಳುತ್ತಿದ್ದೀರಿ ಅದನ್ನು ಇಲ್ಲಿ ಬಹಿರಂಗಪಡಿಸುವುದು ಬೇಡ ಹೋಗಲಿ ಬಿಡಿ.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ಆದಿಯಾಗಿ, ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮತ್ತೆ ಎಲ್ಲಾ ವಿರೋಧ ಪಕ್ಷದ ಮುಖಂಡರುಗಳು, ನಾನು ಸದನದ ಗೌರವವನ್ನು ಕಾಪಾಡುವ ದೃಷ್ಟಿಯಿಂದ ಮಾಡಿಕೊಂಡ ಈ ಮನವಿಯನ್ನು ಗೌರವಿಸಿದ್ದಕ್ಕೆ ಅವರನ್ನು ತುಂಬು ಹೃದಯದಿಂದ ಅಭಿನಂದಿಸುತ್ತಿದ್ದೇನೆ. ಈಗ ನಾವು ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ, ಉಪಾಧ್ಯಕ್ಷರ ಚುನಾವಣೆ. ನಮ್ಮ ಉಪಾಧ್ಯಕ್ಷರ ಚುನಾವಣೆಗೆ ಎರಡು ಸೂಚನೆಗಳು ಬಂದಿದ್ದಾವೆ. ಮೊದಲನೆಯ ಸೂಚನೆಯನ್ನು ಕಳುಹಿಸಿದಂಥ ಸೂಚಕರು ಶ್ರೀಮಾನ್ ಎಂ.ಪಿ.ಪ್ರಕಾಶ್‌ರವರು ತಮ್ಮ ತಾಯಿಯವರ ಆರೋಗ್ಯ ಸರಿಯಿಲ್ಲದೆ ಇರುವುದರಿಂದ ಅವರು ಇವತ್ತು ಸದನಕ್ಕೆ ಹಾಜರಾಗುವುದಕ್ಕಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಆದುದರಿಂದ ನಾನು ಎರಡನೆ ಸೂಚನೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿಯವರನ್ನು ವಿಧಾನಸಭೆಯ ಉಪಾಧ್ಯಕ್ಷರನಾಗಿ ಚುನಾಯಿಸಬೇಕೆಂದು ಶ್ರೀ ಪಿ.ಸಿ. ಸಿದ್ದನಗೌಡರ್ ಸೂಚಿಸುವುದು.

ಉಪಾಧ್ಯಕ್ಷರರ ಚುನಾವಣೆ

ಶ್ರೀ ಪಿ.ಸಿ.ಸಿದ್ಧನಗೌಡರ್ (ಕಲಘಟಗಿ):- ಮಾನ್ಯ ಅಧ್ಯಕ್ಷರೆ, ಶ್ರೀ ಚಂದ್ರ ಶೇಖರ ಮಲ್ಲಿಕಾರ್ಜುನ ಮಾಮನಿ ಅವರನ್ನು ಹತ್ತನೇ ವಿಧಾನ ಸಭೆಯ ಉಪಾಧ್ಯಕ್ಷರನ್ನಾಗಿ

ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಎ.ಬಿ.ಪಾಟೀಲ್ (ಸಾಕೇಶ್ವರ):- ಮಾನ್ಯ ಅಧ್ಯಕ್ಷರೆ, ಶ್ರೀ ಪಿ.ಸಿ.ಸಿದ್ಧನಗೌಡರ್ ಅವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಅಧ್ಯಕ್ಷರು:- ಶ್ರೀ ಪಿ.ಸಿ.ಸಿದ್ಧನಗೌಡರ್‌ರವರು ಸೂಚಿಸಿರುವ ಹಾಗೂ ಶ್ರೀ ಎ.ಬಿ.ಪಾಟೀಲ್‌ವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ.

'' ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮಿನಿಯವರನ್ನು ಹತ್ತನೇ ವಿಧಾನಸಭೆಯ ಉಪಾಧ್ಯಕ್ಷರನ್ನಾಗಿ ಚುನಾಯಿಸುವುದು. ''

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು
ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರನ್ನು
ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು.

ಅಧ್ಯಕ್ಷರು:- ಈಗ ಉಪಾಧ್ಯಕ್ಷರಿಗೆ ಅಭಿನಂದನೆಗಳನ್ನು ಸಲ್ಲಿಸುವುದು. ಮಾನ್ಯ ಸಭಾನಾಯಕರು.

ಶ್ರೀ ಜೆ.ಹೆಚ್.ಪಟೀಲ್ ಮುಖ್ಯಮಂತ್ರಿಗಳು:- ಮಾನ್ಯ ಅಧ್ಯಕ್ಷರೇ, ನಾವು ಬಹಳ ಪ್ರೀತಿಯಿಂದ ಕರೆಯತಕ್ಕಂಥ ಮಾಮನಿಯವರನ್ನು ಈ ಸದನದ ಉಪಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆರಿಸಿರುವುದು ಒಂದು ಹೆಮ್ಮೆಯ ವಿಷಯ. ಹಾಗೆಯೇ, ತಾವು ಈ ಸದನವನ್ನು ಯಾವ ರೀತಿ ನಡೆಸಿಕೊಂಡು ಬಂದಿದ್ದೀರಿ, ಎಲ್ಲಾ ಸಮಯದಲ್ಲೂ ದಕ್ಷತೆಯಿಂದ, ಕೆಲವು ಸಾರಿ ಹಾಸ್ಯದಿಂದ, ಕೆಲವು ಸಾರಿ ಕೋಪದಿಂದ, ಯಾವ ರೀತಿ ಈ ಸದನವನ್ನು ನಡೆಸಿಕೊಂಡು ಬಂದಿದ್ದೀರಿ, ಆ ಗುಣಗಳನ್ನು ಅವರೂ ಕಲಿತು ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

ಅಧ್ಯಕ್ಷರು:- ಈಗ ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು):- ಅಧ್ಯಕ್ಷರೇ, ವಿಧಾನ ಸಭೆಯ ಸನ್ಮಾನ್ಯ ಉಪಾಧ್ಯಕ್ಷರಾಗಿ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರು ಆಯ್ಕೆಯಾಗಿರುವಂಥಾದ್ದು ನಮಗೆಲ್ಲಾರಿಗೂ ತುಂಬಾ ಸಂತೋಷವಾಗಿದೆ. ಅವರು ಒಳ್ಳೆಯ ಒಂದು ಶುಭ ಘಳಿಗೆಯಲ್ಲಿ, ಶುಭ ಮುಹೂರ್ತದಲ್ಲಿ ಈ ಸ್ಥಾನವನ್ನು ಅಲಂಕರಿಸಿದ್ದಾರೆ ಎಂದು ನಾನಾದರೂ ಭಾವಿಸಿದ್ದೇನೆ. ಏಕೆಂದರೆ ಮೊನ್ನೆ ವಿಧಾನ ಮಂಡಲದ ಕಾರ್ಯಕಲಾಪಗಳು ಪ್ರಾರಂಭವಾದಾಗ ಅವತ್ತು ಸಮಯ ಸರಿಯಿರಲಿಲ್ಲ. ಹಾಗಾಗಿಯೇ ನಾವು ಇವರು, ಉಪಾಧ್ಯಕ್ಷರಾಗಿರುವಂಥವರು ಒಳ್ಳೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕು, ನಡೆಸಬೇಕು, ನಮಗೆಲ್ಲಾರಿಗೂ ಮಾರ್ಗದರ್ಶನ ಮಾಡಬೇಕು ಎಂದೇ ಇವತ್ತು ಒಳ್ಳೆಯ ದಿವಸ ಎಂದು ನಾವು ಕೇಳಿಕೊಂಡು ಬಂದು, ಇವತ್ತು ಅವರು ಆ ಸ್ಥಾನಕ್ಕೇರಬೇಕು ಎನ್ನುವ ದೃಷ್ಟಿಯಿಂದಾಗಿದೆ, ತುಂಬಾ ಸಂತೋಷ. ಬಹಳ ಪ್ರಖ್ಯಾತವಾದಂಥ, ಇಡೀ ರಾಜ್ಯದ ಜನರನ್ನು ಆಕರ್ಷಣೆ ಮಾಡುತ್ತಿರುವಂತ ಸವದತ್ತಿಯ ಯಲ್ಲಮ್ಮ ದೇವಸ್ಥಾನ, ಪವಿತ್ರವಾದಂಥ ಆ ಸ್ಥಳ ಯಾವುದಿದೆ, ಆ ಒಂದು ಕ್ಷೇತ್ರದಿಂದ ತಾವು ಬರುತ್ತಿದ್ದೀರಿ. ನಾನು ಅವರಿಗೆ ಶುಭ ಕೋರುತ್ತಿದ್ದೇನೆ. ನಾವು ಎಲ್ಲಾ ರೀತಿ ಸಹಕಾರ ಕೊಡುತ್ತೇವೆ. ಅಧ್ಯಕ್ಷರು ಯಾವ ರೀತಿ ನಮ್ಮ